**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸ ಮೇಟಿ | ಸಿ.ಡಬ್ಲೂ-21 |
| ತಂದೆಯ ಹೆಸರು | : | ಚಂದ್ರಪ್ಪ | ಪಿ.ಡಬ್ಲೂ-10 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ಪಿಐ | |
| ವಾಸ ಸ್ಥಳ | : | ಧಾರವಾಡ. | |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ **17/08/2026**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ :**

ನಾನು ದಿನಾಂಕ 12/02/2024 ರಿಂದ ಇಲ್ಲಿಯವರೆಗೆ ಧಾರವಾಡ ಸಂಚಾರಿ ಪೊಲೀಸ್ ಠಾಣಿಸಿಯಲ್ಲಿ ಪಿಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 16/07/2025 ರಂದು ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-20 ರವರಿಂದ ಕಡತ ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿದ್ದೇನೆ. ಅದೇ ದಿನ ಚಾಸಾ-19 ರವರಿಗೆ ಮೆಮೋ ನೀಡಿ ಶವ ಪಂಚನಾಮೆ ಮಾಡಿಕೊಂಡು ವರದಿ ನೀಡಲು ತಿಳಿಸಿದ್ದೆ ಆ ಪ್ರಕಾರವಾಗಿ ಚಾಸಾ-19 ರವರು ನಿಪಿ-6 ರಂತೆ ಶವ ಪಂಚನಾಮೆ ಮಾಡಿ ಚಾಸಾ-1 ರವರ ಹೇಳಿಕೆ ಪಡೆದು ನನ್ನ ಮುಂದೆ ವರದಿ ಹಾಜರುಪಡಿಸಿದರು. ಸದರಿ ಮೆಮೋ ಹಾಗೂ ವರದಿಯನ್ನು ಸಾಕ್ಷಿಯು ನೋಡಿ ಅವುಗಳನ್ನು ಗುರುತಿಸಿದ್ದು ಅದನ್ನು ನಿಪಿ-30 ಹಾಗೂ 31 ಅಂತಾ ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-30(ಎ) ಮತ್ತು 31(ಎ) ಎಂದರು ಗುರುತಿಸಲಾಯಿತು. ಚಾಸಾ-9 ಮತ್ತು 10 ರವರ ಮರು ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ.

3. ದಿನಾಂಕ 19/07/2025 ರಂದು ಈಗ ನೋಡುತ್ತಿರುವ ಒಂದು ಸಿಡಿಯನ್ನು ವರದಿಯೊಂದಿಗೆ ನ್ಯಾಯಾಲಯಕ್ಕೇ ಹಾಜರುಪಡಿಸಿದ್ದೇನೆ. ಸದರಿ ವರದಿಯನ್ನು ಮತ್ತು ಸಿಡಿಯನ್ನು ನಿಪಿ-32 ಮತ್ತು 33 ಎಂದು ಗುರುತಿಸಲಾಯಿತು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು 32(ಎ) ಎಂದು ಗುರುತಿಸಲಾಯಿತು. ದಿನಾಂಕ 20/07/2025 ರಂದು ಚಾಸಾ-1 ರವರ ಮರು ಹೇಳಿಕೆಯನ್ನು ಹಾಗೂ ಚಾಸಾ-11 ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕ 22/07/2025 ರಂದು ಚಾಸಾ-8 ರವರು ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ,

3. ದಿನಾಂಕ 23/07/2025 ರಂದು ಚಾಸಾ-12 ರವರಿಗೆ ಮೆಮೋ ನೀಡಿ ಅಪಘಾತ ಪಡಿಸಿದ ವಾಹನ ಕೆಎ-25-ಇ ಎಕ್ಸ -2094 ವಾಹನ ಹಾಜರುಪಡಿಸುಂತೆ ತಿಳಿಸಿದ್ಧೆ ಅದೇ ದಿನ ಆತ ಸದರಿ ವಾಹನವನ್ನು ನನ್ನ ಮುಂದೆ ಹಾಜರುಪಡಿಸಿದ.

4. ಅದೇ ದಿನ ಚಾಸಾ-12 ರವರು ಹಾಜರುಪಡಿಸಿದ ವಾಹನ ಕೆಎ-25 ಇವಿ-8451 ಮೋಟಾರು ಸೈಕಲ್ ಅನ್ನು ಚಾಸಾ-1 ಮತ್ತು 8 ರಿಂದ 10 ರವರಿಗೆ ತೋರಿಸಿ ಅವರ ಮರು ಹೇಳಿಕೆ ಪಡೇದುಕೊಂಡಿದ್ದೇನೆ. ಚಾಸಾ-5 ಮತ್ತು 69 ರವರಿಗೆ ನೋಟೀಸ್ ನೀಡಿ ಚಾಸಾ-2 ರವರ ಸಮಕ್ಷಮ ಈಗ ನೋಡುತ್ತಿರುವ ನಿಪಿ- 13 ರಂತೆ ಜಪ್ತಿ ಪಂಚನಾಮೆ ಮಾಡಿದ್ದೇನೆ ಮತ್ತು ಆ ಕಾಲಕ್ಕೆ ನಿಪಿ-14 ರಿಂದ 19 ರ ಫೋಟೊಗಳನ್ನು ತೆಗೆಯಲಾಗಿದೆ. ಸಾಕ್ಷಿ ನಿಪಿ-12 ಮತ್ತು 13 ರಲ್ಲಿಯ ತನ್ನ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-12(ಸಿ) ಮತ್ತು 13(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಜಪ್ತಿ ಪಡಿಸಿದ ವಾಹನಗಳ ಬಗ್ಗೆ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿ ಸಲ್ಲಿಸಿ, ಆರ್ ಟಿ ಒ

ರವರಿಗೆ, ಸದರಿ ವಾಹನಗಳ ತಪಾಸಣೆ ಮಾಡುವಂತೆ ಕೋರಿದ್ದೇನೆ. ಅದೇ ದಿನ ಚಾಸಾ-13 ರವರಿಂದ ನಿಪಿ-15 ಮತ್ತು 16 ರಂತೆ ಪ್ರಮಾಣಪತ್ರ ಪಡೆದುಕೊಂಡಿದ್ದೇನೆ. ದಿನಾಂಕ 24/07/2025 ರಂದು ಅಪಘಾತ ಪಡಿಸಿದ ವಾಹನದ ಜಪ್ತಿ ಪಂಚನಾವೆಯ ಡಿವಿಡಿಯನ್ನು ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸದರಿ ವರದಿಯನ್ನು ಸಾಕ್ಷೀಯು ನೋಡಿ ಗುರುತಿಸಿದ್ದು ಅದನ್ನು ನಿಪಿ-34 ಎಂದು ಡಿವಿಡಿಯನ್ನು ನಿಪಿ-35 ಎಂದು ಗುರುತಿಸಲಾಯಿತು.

6. ದಿನಾಂಕ 29/07/2025 ರಂದು 1 ನೇ ಆರೋಪಿ ಠಾಣೆಗೆ ಹಾಜರಾಗಿದ್ದು, ಆ ದಿನ ಚಾಸಾ-1, 8 ರಿಂದ 11 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ 1 ನೇ ಆರೋಪಿಯನ್ನು ತೋರಿಸಿ ಅವರಿಂದ ಮರು ಹೇಳಿಕೆಗಳನ್ನು ಪಡೆದು, ಆರೋಪಿಯ ವಿರುದ್ಧ ದಸ್ತಗೀರಿ ನಿಯಮಾವಳಿಗಳನ್ನು ಪಾಲಿಸಿ ಆತನನ್ನು ಜಾಮೀನಿನ ಮೇಲೆ ಬಿಟ್ಟಿದ್ದೇನೆ.

7. ದಿನಾಂಕಏ 04/08/2025 ರಂದು 2 ನೇ ಆರೋಪಿಗೆ ಕಲಂ 133 ಎಂವಿ ಆಕ್ಟ ರ ಅಡಿ ನೊಟೀಸ್ ನೀಡಿ ಅವರಿಂದ ಉತ್ತರ ಪಡೆದು ಮುಚ್ಚಳಿಕೆ ಪತ್ರ ಪಡೆದು ಅವರ ವಾಹನವನ್ನು ಅವರ ಸುಪರ್ದಿಗೆ ನೀಡಿದ್ದೇನೆ. ಸದರಿ ದಾಖಲೆಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-36 ರಿಂದ 38 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿನ ಸಾಕ್ಷಿಯ ಸಹಿಗಳನ್ನು 36(ಎ) ರಿಂದ 38(ಎ) ಎಂದು ಗುರುತಿಸಲಾಯಿತು.

8. ದಿನಾಂಕಾ 28/07/2025 ರಂದು ಚಾಸಾ-15 ರವರಿಂದ ನಿಪಿ-18 ಅನ್ನು ಪಡೆದು ಅದನ್ನು ಕಡತಕ್ಕೆ ಅಳವಡಿಸಿಕೂೀಂಡಿದ್ದೇನೆ, ದಿನಾಂಕಾ 29/08/2025 ರಂದು ಚಾಸಾ-18 ರವರಿಂದ ನಿಪಿ-19 ಅನ್ನು ಪಡೆದು ಅದನ್ನು ಕಡತಕ್ಕೆ ಅಳವಡಿಸಿಕೂೀಂಡಿದ್ದೇನೆ, ದಿನಾಂಕ 14/08/2025 ರಂದು ಚಾಸಾ-14 ರಿವರಿಂದ ನಿಪಿ-14 ಅನ್ನು ಪಡೆದು ಅದನ್ನು ಕಡತಕ್ಕೆ ಅಳವಡಿಸಿಕೂೀಂಡಿದ್ದೇನೆ. ದಿನಾಂಕ 11/09/2025 ರಂದು ಚಾಸಾ-18 ರವರಿಂದ ಡಿಸ್ಚಾರ್ಜ ಸಮ್ಮರಿ ಪಡೆದು ಅದನ್ನು ಕಡತಕ್ಕೆ ಅಳವಡಿಸಿಕೂೀಂಡಿದ್ದೇನೆ. ದಿನಾಂಕ 18/09/2025 ರಂದು ಚಾಸಾ-17 ರವರಿಂದ ಮತ್ತೊಂದು ಡಿಸ್ಚಾರ್ಜ ಸಮ್ಮರಿ ಪಡೆದು ಅದನ್ನು ಕಡತಕ್ಕೆ ಅಳವಡಿಸಿಕೂೀಂಡಿದ್ದೇನೆ, ತನಿಖೆಯಿಂದ ಆರೋಪಿತರು ಅಪರಾಧ ಎಸಗಿದ್ದಾರೆ ಎಂದು ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲಿಸಿದ್ದೇನೆ.

**ಪಾಟೀಸವಾಲು : ಆರೋಪಿತರ ಪರ ಶ್ರೀ ಎಂ ಜಿ ಆರ್ ವಕೀಲರಿಂದ :**

1. ನಾನು ಮೇಲೆ ಹೇಳಿದಂದತೆ ನಿಪಿ-3, 6, ಹಾಗೂ 13 ರಂತೆ ಪಂಚನಾಮೆಗಳನ್ನು ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರ ಹೇಳಿಕೆ ಹಾಗೂ ಉಳಿದ ಸಾಕ್ಷಿದಾರರ ಹೇಳಿಕೆಗಳನ್ನು ಈ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಅವರು ಹೇಳದೇ ಇದ್ದರೂ ಸಹಿತ ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ-2 ಮತ್ತು 12 ರಲ್ಲಿ ನೊಟೀಸ ನೀಡಿದ್ದೆ ಎನ್ನುವುದು ಸುಳ್ಳು ಅನ್ನುವುದು ಸರಿಯಲ್ಲ. ಮೃತ ವ್ಯಕ್ತಿ ವಿಕಲಚೇತನ ಇದ್ದ ಎಂದರೆ ಸರಿ, ಅಪಘಾತ ಸ್ಥಳಕ್ಕೆ ನಮ್ಮ ಠಾಣೆಯಿಂದ 5 ನಿಮಿಷದಲ್ಲಿ

ಹೋಗಬಹುದು ಎಂದರೆ ಸಾಕ್ಷಿಯು 10 ನಿಮಿಷ ಆಗುತ್ತದೆ ಎಂದು ಹೇಳುತ್ತಾರೆ. ದೂರು ನೀಡಲು ಆಗಿರುವ ವಿಳಂಬವನ್ನು ಚಾಸಾ-1 ನಮಗೆ ಹೇಳಿಲ್ಲ ಎಂದರೆ ಸರಿ . ದೂರಿನಲ್ಲಿ ಅಪಘಾತಪಡಿಸಿದ ವಾಹನ ಯಾವುದೆಂದು ಉಲ್ಲೇಖಿಸಿಲ್ಲ ಎಂದರೆ ಸರಿ . ತಾಯಮ್ಮ ಕಲ್ಯಾಣಮಂಟಪದ ಹತ್ತಿರ 8-10 ಅಡಿ ಅಗಲದ ಫುಟ್ ಪಾತ್ ಇದೆ ಎಂದರೆ ಸರಿ . ಸದರಿ ಸ್ಥಳ ಸಾಕಷ್ಟು ಜನನಿಬಿಡ ಪ್ರದೇಶ ಆಗಿದ್ದರಿಂದ ಯಾವುದೇ ವಾಹನ ವೇಗವಾಗಿ ಚಲಾಯಿಸುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಶಿವಾಜಿ ಶಿಂಧೆ ಪಿಎಸ್ಐ ಇದ್ದರು ಅಂದರೆ ಸರಿ . ಅವರ ಮಗ ಈ ಕೇಸಿನಲ್ಲಿ ಸಾಕ್ಷಿಯಾಗಿದ್ದಾರೆ ಎಂದರೆ ಸರಿ . ಶಿವಾಜಿ ಶಿಂಧೆ ಮತ್ತು ಮೃತ ಶ್ರೀಧರ ಇಬ್ಬರೂ ಒಂದೇ ಜಾತಿ ಎಂದರೆ ಸರಿಯಲ್ಲ. ವೈದ್ಯಕೀಯ ದಾಖಲೆಯಲ್ಲಿ ಶ್ರೀಧರ ಇವರಿಗೆ ಬೇರೆ ಬೇರೆ ಖಾಯಿಲೆಗಳು ಇತ್ತು ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿ . ಶ್ರೀಧರ ಈತ ರಸ್ತೆ ಅಪಘಾತದಲ್ಲಿ ಮೃತಪಟ್ಟಿಲ್ಲ ತನ್ನ ಖಾಯಿಲೆಗಳಿಂದ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಖಾಯಿಲೆಗಳಿಂದ ಶ್ರೀಧರ ಮೃತಪಟ್ಟಿದ್ದರೂ ಸಹಿತ ಆತನ ಕುಟುಂಬದವರಿಗೆ ಪರಿಹಾರಧನ ಸಿಗಲಿ ಎಂದು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.